# 11

# “ಐಕತ್ಯೆಯನ್ನು ಕಾಯ್ದುಕೊಳ್ಳುವ ಮೂಲಕ ಯೋಗ್ಯತೆಯಲ್ಲಿ ನಡೆಯುವ ನಿಮ್ಮ ಕರೆ”

# (4:1-3)

ಎಫೆಸ ಪತ್ರಿಕೆಯು ಎರಡನೆಯ ಅರ್ಧದಲ್ಲಿ (ಅಧ್ಯಾಯ 4-6) ಸಭೆಯ ಜೀವಿತಕೋಸ್ಕರ ಪ್ರಾಯೋಗಿಕ ಅನ್ವಯಗಳು ಕೊಡಲ್ಪಟ್ಟಿವೆ. ಇಲ್ಲಿ ಪೌಲನ ಬೋಧನೆಯು ಆತನು ಈಗಾಗಲೆ ಮಂಡಿಸಿದಂತ ಮಹಿಮಾಯುತ ಸಭೆ ದೇವರೊಂದಿಗಿನ ಅದರ ಸಂಬಂಧ ಆಧಾರಿತ ಸತ್ಯದ ಮೇಲೆ ಇರುವುದಾಗಿದೆ (ಅಧ್ಯಾಯ 1-3). ಆತನು ಕೊಟ್ಟಂತ ಪ್ರಾಯೋಗಿಕ ಅನ್ವಯಗಳು ನಾಲ್ಕು ಭಾಗಗಳಲ್ಲಿ ವಿಭಾಗಿಸಬಹುದು, ಪ್ರತಿಯೊಬ್ಬನು ಅತ್ಯಗತ್ಯವಾದ “ನಡೆ”ಯನ್ನು ಹೊಂದಿರಬೇಕು.[1] ಈ ಸೂಚನೆಗಳು, ಸಭೆಯ ಜೀವಿತದಿಂದ ಹೊರಗೆ ಇರುವಾಗ ಪ್ರಾರ್ಥನೆಗೆ ಉತ್ತರವನ್ನು 3:14-21ರಿಂದ ಕೊಡಬಹುದು.

ಅಧ್ಯಾಯ 4ರಲ್ಲಿ ಪೌಲನು ಎಫೆಸದವರಿಗೆ ಮೊದಲು “ದೇವರಿಂದ ಕರೆಯಲ್ಪಟ್ಟ ಕಾರಣ ಯೋಗ್ಯರಾಗಿ ನಡಕೊಳ್ಳಬೇಕೆಂದು” ಪ್ರಾರ್ಥಿಸಿದನು (4:1). ಆತನು ನಂತರದಲ್ಲಿ ಇದನ್ನು ಸಂಪೂರ್ಣಗೊಳಿಸುವ ಎರಡು ಮಾರ್ಗಗಳನ್ನು ಚರ್ಚಿಸುತ್ತಾನೆ: ಒಂದಾಗಿ ಇರುವುದರ ಮೂಲಕ (4:2-16) ಮತ್ತು ಅವರ ಮನಸ್ಸನ್ನು ಆತ್ಮನಲ್ಲಿ ಪುನರ್ ನವೀಕರಿಸುವ ಮೂಲಕ (4:17-32).

## ಕರೆಗೆ ಯೋಗ್ಯರಾಗಿ ಜೀವಿಸುವ ರೀತಿ (4:1)

**1ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ ಸೆರೆಯವನಾದ ನಾನು ನಿಮ್ಮನ್ನು ಪ್ರಬೋಧಿಸುತ್ತೇನೆ.**

**ವಚನ 1. ಆದಕಾರಣ** ಎಂಬುದು ಪೌಲನು ಎಫೆಸದ ಸಹೋದರರಿಗೆ ಏನನ್ನು ಹೇಳಬೇಕೆಂದು ಬಯಸಿದ್ದನೊ ಅದನ್ನು ಈಗಾಗಲೇ ಹೇಳಿದ್ದಾನೆ ಎಂಬುದಕ್ಕೆ ಸೇರಿಸುವುದಾಗಿದೆ. ಆತನು ತನ್ನನ್ನು ತಾನು **ಕರ್ತನ ಸೇವೆಯಲ್ಲಿ ಸೆರೆಯವನಾದ** ಎಂದು ಸೂಚಿಸುತ್ತಾನೆ ಯಾಕೆಂದರೆ ಈ ಪತ್ರವನ್ನು ಬರೆಯುವ ಸಮಯದಲ್ಲಿ ಆತನು ರೋಮದ ಸೆರೆಮನೆಯಲ್ಲಿ ಇದ್ದನು. ವಾಸ್ತವವಾಗಿ ಆತನ ಕಾರ್ಯವು ಆತನನ್ನು ಸೆರೆಮನೆಯತ್ತ ನಡೆಸಿತು ಆತನ ಅನ್ವಯಕ್ಕೆ ಹೆಚ್ಚಿನ ಒತ್ತಡವನ್ನು ಕೊಟ್ಟಿತು.

ಪೌಲನ ಇತರ ಪತ್ರಿಕೆಗಳಲ್ಲಿ ಇರುವಂತೆ **ಪ್ರಬೋಧಿಸುತ್ತೇನೆ** (*parakaleō*), ಅಥವಾ “ಪ್ರೇರೇಪಿಸು” (NIV), ಎಂಬುದಾಗಿ ಇಲ್ಲಿ ಬಳಸಲ್ಪಟ್ಟದ್ದು ಪತ್ರದ ತಾತ್ವಿಕ ಭಾಗದಿಂದ ಪ್ರಾಯೋಗಿಕ ಅನ್ವಯದತ್ತ ಬದಲಾವಣೆಯಾದದ್ದನ್ನು ಸೂಚಿಸುವುದಾಗಿದೆ (ನೋಡಿರಿ ರೋಮಾಪುರ 12:1; ಫಿಲಿಪ್ಪಿ 4:2; 1 ಥೆಸಲೋನಿಕ 4:1, 10). ಈ ಕ್ರಿಯಾಪದವು ಹೊಸ ಒಡಂಬಡಿಕೆಯಲ್ಲಿ ಮೂರು ಪ್ರಮುಖ ಬಳಿಕೆಯನ್ನು ಹೊಂದಿದೆ: (1) “ಸಹಾಯಕ್ಕಾಗಿ ಕೇಳುವದು, ಅಂಗಲಾಚು, ಮೊರೆಯಿಡು”; (2) “ಸಮಾಧಾನಪಡಿಸು”; ಅಥವಾ (3) ವಚನ 1ರಲ್ಲಿ ಇರುವಂತೆ “ಬುದ್ಧಿಹೇಳುವದು” ಆಗಿದೆ.[2] ಪೌಲನು ತನ್ನ ಅಪೊಸ್ತಲತ್ವದ ಅಧಿಕಾರವನ್ನು ಚಲಾಯಿಸಲು ಈ ಪದವನ್ನು ಬಳಸಲಿಲ್ಲ, ಆದರೆ ಕ್ರಿಸ್ತನಿಗಾಗಿ ತನ್ನ ಸಂಕಟಗಳು

ಮತ್ತು ಓದುಗರ ಜೊತೆಯ ಆತನ ಮಿತ್ರತ್ವಗಳ ಆಧಾರದ ಮೇಲೆ ತನ್ನ ಓದುಗರಿಗೆ ವಿನಂತಿಸುವವನಾಗಿದ್ದಾನೆ. ಆತನು "ಆದಕಾರಣ" ಎಂಬ ಪದದ ಜೊತೆ "ಪ್ರಬೋಧಿಸುತ್ತೇನೆ" ಎಂಬ ಪದವನ್ನು ಬಳಸಿದ್ದರಿಂದ, ಪತ್ರದ ಮೊದಲ ಭಾಗದಲ್ಲಿ ದಾಖಲಿತವಾಗಿದಂತೆ ದೇವರು ಅವರಿಗಾಗಿ ಮಾಡಿದ ಎಲ್ಲವುಗಳ ಆಧಾರದ ಮೇಲೆ ಪೌಲನು ಎಫೆಸದವರ ಭಾಗದಲ್ಲಿ ಯೋಗ್ಯವಾದ ನೈತಿಕ ನಡವಳಿಕೆಗಾಗಿ ಕರೆಯನ್ನು ಕೊಡುತ್ತಿದ್ದಾನೆ.

ಕ್ರೈಸ್ತರಿಗೆ ಪೌಲನ ಬೋಧನೆಯು ಮತ್ತು **ನಡಕೊಳ್ಳಬೇಕು** ಎಂಬುದರ ಮೊದಲ ಬಳಕೆಯು 4:1ರಲ್ಲಿ ಸಿಕ್ಕುವುದಾಗಿದೆ. ನಡಕೊಳ್ಳಬೇಕು ("ಜೀವಿಸು"; NIV) ಇದು *peripateō*ದ ಭಾಷಾಂತರವಾಗಿದೆ. LXXದಲ್ಲಿ ಈ ಕ್ರಿಯಾಪದವು ಇಬ್ರಿಯ ಪದವಾದ *halak*ದ ಭಾಷಾಂತರವಾಗಿದ್ದು "ನೈತಿಕ ಆಚರಣೆ" ಅಥವಾ "ಜೀವಿಸುವ ರೀತಿ" ಎಂಬರ್ಥವನ್ನು ಕೊಡುವುದಾಗಿದೆ.[3] ಎಫೆಸದವರಿಗೆ ಪೌಲನ ಬೋಧನೆಯು **ದೇವರಿಂದ ಕರೆಯಲ್ಪಟ್ಟ ಕಾರಣ [ಅವರು] ಯೋಗ್ಯರಾಗಿ** ಅವರ ಜೀವನದತ್ತ ನಡೆಸುವುದು, ಅಥವಾ ತಮ್ಮನ್ನು ನಿರ್ಮಿಸಿಕೊಳ್ಳುವದು ಆಗಿದೆ.

"ಯೋಗ್ಯರಾಗಿ" ಎಂಬುದು *axiōs*,ದ ಭಾಷಾಂತರವಾಗಿದ್ದು "ಬರುವುದರ ಪ್ರಕಾರ ಅನುರೂಪವಾಗಿರು; *ಸೂಚಿಸಲ್ಪಟ್ಟ ಸಂಗತಿಯ* ಜೊತೆ ಸಮಾನ ಮೌಲ್ಯದ ಪ್ರಕಾರದಲ್ಲಿ" ಎಂಬರ್ಥವನ್ನು ಕೊಡುತ್ತದೆ.[4] ಮತ್ತೊಂದೆಡೆ ಪೌಲನು ಕ್ರೈಸ್ತರಿಗೆ ಬರೆಯುವಾಗ ಹಲವು ಬಾರಿ ಯೋಗ್ಯವಾಗಿ ಜೀವಿಸುವುದರ ವಿಚಾರವನ್ನು ಬಳಸಿದ್ದಾನೆ. ಫಿಲಿಪ್ಪಿ 1:27ರಲ್ಲಿ "ಕ್ರಿಸ್ತನ ಸುವಾರ್ತೆಗೆ ಯೋಗ್ಯರಾಗಿ ನಡೆದುಕೊಳ್ಳಿರಿ" ಎಂದು ಬರೆಯುತ್ತಾನೆ (ನೋಡಿರಿ ಕೊಲಸ್ಸೆ 1:10; 1 ಥೆಸಲೋನಿಕ 2:12). ಜನರು ಸುವಾರ್ತೆಯ ಬೋಧನೆಯ ಮೂಲಕ ದೇವರಿಂದ ಕರೆಯಲ್ಪಟ್ಟಿದ್ದಾರೆ (2 ಥೆಸಲೋನಿಕ 2:14); ಅವರು ಸುವಾರ್ತೆಗೆ ವಿಧೇಯತೆಯ ಮೂಲಕ ಪ್ರತಿಕ್ರಯಿಸಿದಾಗ, ಅವರು "ಕರೆಯಲ್ಪಟ್ಟವರು" ಆಗುವರು (ರೋಮಾಪುರ 1:6).

**ಕರೆಯಲ್ಪಟ್ಟ ಕಾರಣ** ಎಂಬುದು ಹಿಂದೆ ಸುವಾರ್ತೆಯ ಮೂಲಕ ಜನರಿಗೆ ತರಲ್ಪಟ್ಟ ದಿವ್ಯ ಉಪಕ್ರಮವನ್ನು, ಅದರಂತೆಯೆ ಹಿಂದೆ ಅವರು ಕ್ರೈಸ್ತರಾದಾಗ ಅವರ ಕ್ರಿಯಾತ್ಮಕ ಪ್ರತಿಕ್ರಿಯೆಯು ಆಗಿದೆ ಸೂಚಿಸುವುದಾಗಿದೆ. ಈ ಪ್ರಸ್ತುತ ಸ್ಥಿತಿಯಲ್ಲಿ ಅವರು ಕ್ರಿಸ್ತನಲ್ಲಿ ಯಾವದು ಆಗಬೇಕೆಂದು ಬಂದಿದ್ದಾರೋ ಅದರೊಡನೆ ಸಾಮರಸ್ಯದಿಂದ ಜೀವಿಸುವದು ಆಗಿದೆ. ದಿವ್ಯ ಉಪಕ್ರಮವು ಮತ್ತು ಮಾನವನ ಪ್ರತಿಕ್ರಿಯೆಯು ಕೈಯಿಂದ ಕೈಗೆ ಹೋಗುತ್ತದೆ. ಯಾವಾಗ ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ, ಇರುವ ಅವಕಾಶವನ್ನು ಒಪ್ಪಿಕೊಳ್ಳುತ್ತಾನೋ ಆಗ, ದೇವರ ಕರೆಯ ಜವಾಬ್ದಾರಿಯನ್ನು ಕೂಡಾ ಜೊತೆಗೂಡಿಸಿಕೊಳ್ಳುವದನ್ನು ಆತನು ಒಪ್ಪಿಕೊಳ್ಳಬೇಕು.

ಪೌಲನ ಮನವಿಯು ಅನೈಚ್ಛಿಕವಾದದ್ದಲ್ಲ, ಆದರೆ ಕ್ರಿಸ್ತನಲ್ಲಿ ಇರುವುದರ ಯೋಗ್ಯವಾದ ಪರಿಣಾಮವು ಮತ್ತು ಆತನ ದೇಹದ, ಸಭೆಯ ಭಾಗವಾಗಿರುವದು ಆಗಿದೆ. ಯೇಸು ಕ್ರಿಸ್ತನಲ್ಲಿ ಒಂದಾಗಿ ಯೋಗ್ಯರಾಗಿನಡಕೊಳ್ಳುವ ರೀತಿಯನ್ನು ಆತನು ಚರ್ಚಿಸಿದಂತೆಯೇ (4:2-16), ಆತನು ಮೊದಲು ಈ ಐಕ್ಯತೆಗೆ ಸರಿಯಾದ ಭಾವನೆಯು ಅವಶ್ಯ ಎಂದು ಹೇಳಿದನು.

## ನಮ್ಮ ವಿಷಯದಲ್ಲಿ ಸರಿಯಾದ ಭಾವನೆ ತಾಳುವದು (4:2)

**2ನೀವು ಪೂರ್ಣ ವಿನಿಯ ಸಾತ್ವಿಕತ್ವಗಳಿಂದಲೂ.**

**ವಚನ 2. ವಿನಿಯದಿಂದ** *tapeinophrosunē* ಎಂಬುದರಿಂದ ಭಾಷಾಂತರವಾಗಿದ್ದು, ಒಬ್ಬನ "ಮನಸ್ಸಿನಲ್ಲಿ ದೀನಭಾವ ತಾಳುವದು" ಎಂಬಂತೆ ವ್ಯಾಖ್ಯಾನಿಸಲ್ಪಟ್ಟ ಭಾವನೆಯತ್ತ ಇರುವುದು ಆಗಿದೆ.[5] Greco-Roman world ಜಗತ್ತಿನಲ್ಲಿ, ಈ ಪದವು ನಕಾರಾತ್ಮಕವಾಗಿದ್ದು, ಗುಲಾಮಗಿರಿಯ ಜೊತೆ ಹೊಂದಿರುವದು ಆಗಿದೆ.[6] ಯೆಹೂದಿ ವಿಚಾದಲ್ಲಿ, ಹೇಗೋ,

"ವಿನಿಯವು" ಎಂಬುದರ ಜೊತೆ ಹೊಂದಾಣಿಕೆಯಾಗಿದ್ದು ದೇವರ ದೃಷ್ಟಿಯಲ್ಲಿ ಉನ್ನತಿಕಗೇರುವ ಬಡವ ಎಂಬುದರ ಜೊತೆಯಲ್ಲಿ ಇರುವುದಾಗಿದೆ. ಹೊಸ ಒಡಂಬಡಿಕೆಯಲ್ಲಿ, ವಿನಿಯವು ಮದಾಗಥ ಗರ್ವಪದದ ಜೊತೆಯ ವ್ಯತ್ಯಾಸ ಮಾಡುವುದಾಗಿದೆ (ನೋಡಿರಿ 1 ಪೇತ್ರನು 5:5) ಮತ್ತು ನಂಬಿಕೆಯ ಸಮುದಾಯದಲ್ಲಿ ಒಂದು ಮಹತ್ವದ ಗುಣವಾಗಿದೆ. ಫಿಲಿಪ್ಪಿ 2:3 "ಪಕ್ಷಪಾತದಿಂದಾಗಲೀ ಒಣಹೆಮ್ಮೆಯಿಂದಾಗಲೀ ಯಾವುದನ್ನು ಮಾಡದೆ ಪ್ರತಿಯೊಬ್ಬನೂ ದೀನಭಾವದಿಂದ ಮತ್ತೊಬ್ಬನು ತನಗಿಂತ ಶ್ರೇಷ್ಟರೆಂದು ಎಣಿಸಲಿ" ಎಂದು ಹೇಳುತ್ತದೆ. ಪ್ರಮುಖವಾದ ವಿನಿಯವೆಂದರೆ ಕ್ರಿಸ್ತನು ಈ ಲೋಕಕಕ್ಕೆ ಬರುವದು ಮತ್ತು ಎಲ್ಲ ಜನರಿಗಾಗಿ ಮರಣಿಸುವದೇ ಆಗಿದೆ (ಫಿಲಿಪ್ಪಿ 2:5-8).

ಗರ್ವದ ಐಕತ್ಯೆಯ ವೈರಿಯಾಗಿದೆ. ಅಭಿಪ್ರಾಯದ ಮತ್ತು ಪ್ರಾಶಸ್ತ್ಯದ ವಿಷಯಗಳಲ್ಲಿ ಗರ್ವವು ತನ್ನದೇ ಮಾರ್ಗವನ್ನು ಸೂಚಿಸುವುದಾಗಿದೆ, ದೇವರು "ಗರ್ವವನ್ನು ವಿರೋಧಿಸುವವನಾಗಿದ್ದಾನೆ" (ಯಾಕೋಬ 4:6). ಒಬ್ಬ ವ್ಯಕ್ತಿಯು "ತನ್ನ ಯೋಗ್ಯತೆಗೆ ಮೀರಿ ತನ್ನ ಭಾವಿಸಿಕೊಳ್ಳ"ಬಾರದು ಎಂದು ಕಲಿತಾಗ (ರೋಮಾಪುರ 12:3), ಒಂದು ಅವಶ್ಯಕವಾದ ಹೆಜ್ಜೆಯು ತೆಗೆದುಕೊಳ್ಳಲ್ಪಟ್ಟಿತು. ಒಬ್ಬನ ಬಗ್ಗೆ ಯೋಗ್ಯವಾದ ಅಭಿಪ್ರಾಯವು ಐಕತ್ಯೆಯ ಮೊದಲ ಅವಶ್ಯಕತೆಯು ಆಗಿದೆ.

## ಇತರರ ಬಗ್ಗೆ ಯೋಗ್ಯಮನೋಭಾವನೆ (4:2)

**[2]ನೀವು ಪೂರ್ಣ ವಿನಿಯ ಸ್ವಾತಿಕತ್ವಗಳಿಂದಲೂ ಧೀರ್ಘಶಾಂತಿಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನೊಬ್ಬರು ಸಹಿಸಿಕೊಳ್ಳಿರಿ.**

**ವಚನ 2. ಸ್ವಾತಿಕತ್ವ** ಗ್ರೀಕ್ ನಾಮಪದದ ಭಾಷಾಂತರವಾದ *prautēs*, ಆಗಿದ್ದು, ಅದು "ಸೌಜನ್ಯ, ಸೌಹಾರ್ದತೆ ಮತ್ತು ಎಲ್ಲದರಲ್ಲಿ ಒಳ್ಳೆಯದನ್ನು ನೋಡುವ ಯಾವುದೇ ವೈಯಕ್ತಿಕ ಖ್ಯಾತಿಗೆ ಅಥವಾ ಲಾಭಕ್ಕೆ ಸಂಬಂಧಿಸಿದವುಗಳು ಇಲ್ಲದೆ ಒಬ್ಬನ ಹಕ್ಕನ್ನು ಬಿಟ್ಟುಕೊಡುವ ನಿರ್ಧಾರ" ಎಂಬ ಲಕ್ಷಣಗಳನ್ನು ಒಳಗೊಂಡಿದೆ.[7] ಈ ಲಕ್ಷಣವು ಸಹ ಕ್ರಿಸ್ತನ ಗುಣವಾಗಿದೆ (2 ಕೊರಿಂಥ 10:1), ಮತ್ತು ಇದು ಒಂದು ಆತ್ಮನ ಫಲದ ಭಾಗವು ಆಗಿದೆ (ಗಲಾತ್ಯ 5:23). ಪೌಲನು ಸಮಸ್ಯೆ ಪೀಡಿತ ಕೊರಿಂಥದವರೊಂದಿಗೆ ವ್ಯವಹರಿಸಿದ ಆತನ ಭಾವನೆಯನ್ನು ಇದು ವರ್ಣಿಸುತ್ತದೆ (1 ಕೊರಿಂಥ 4:21), ಮತ್ತು ತನ್ನ ಎದುರಾಳಿಗಳನ್ನು ಯೌವನಸ್ಥನಾದ ಬೋಧಕ ತಿಮೊಥೆಯನು ಎದುರಿಸಿದ್ದನ್ನು ಆತನು ಶ್ಲಾಘಿಸಿದನು (2 ತಿಮೊಥೆ 2:24, 25).

**ಧೀರ್ಘಶಾಂತಿಯಿಂದಲೂ** (*makrothumia*); ದ ಭಾಷಾಂತರವಾಗಿದೆ, ಆದರೆ ಅಸಂಖ್ಯಾತ ಇತರ ಹೊಸ ಒಡಂಬಡಿಕೆಯ ಪರಿಚ್ಚೇದಗಳಲ್ಲಿ "ದೀರ್ಘಶಾಂತಿ" ಎಂದು ಸಹ (*hupomonē*)ದ ಭಾಷಾಂತರವಾಗಿದೆ. ಈ ವಚನದಲ್ಲಿ, NKJV ಭಾಷಾಂತರಕಾರರು, *makrothumia* ವನ್ನು "ದೀರ್ಘ ತಾಳ್ಮೆ" ಎಂದು ಸಹ ಬಳಸಲಾಗಿದೆ. Richard C. Trench ರವರು ಎರಡು ಪದಗಳನ್ನು ವ್ಯತ್ಯಾಸ ಮಾಡಿದ್ದಾರೆ:

> *Makrothumia [ದೀರ್ಘತಾಳ್ಮೆ]*ಯು ವ್ಯಕ್ತಿಗೆ ಸಂಬಂಧಿಸಿದ ತಾಳ್ಮೆಯನ್ನು ವ್ಯಕ್ತಪಡಿಸುವಾಗ ಕಂಡುಬರುವಂಥದ್ದು ಆಗಿದ್ದು, *hupomonē* ವಸ್ತುವಿಗೆ ಸಂಬಂಧಿಸಿದ್ದು ಆಗಿದೆ. ಮನುಷ್ಯನು [ದೀರ್ಘ ತಾಳ್ಮೆಯನ್ನು ಹೊಂದಿದವ] ಹಾನಿಕಾರಕ ವ್ಯಕ್ತಿಯೊಡನೆ ಇರುವವನಾಗಿರುತ್ತಾನೆ, ಅವರಿಗೆ ಕೆಣಕಲ್ಪಟ್ಟು ತನ್ನನ್ನು ತಾನು ತೊಂದರೆ ಮಾಡಿಕೊಳ್ಳುವುದಿಲ್ಲ ಅಥವಾ ಕೋಪದಿಂದ ಆವೇಶಗೊಳ್ಳುವುದಿಲ್ಲ [2 ತಿಮೊಥಿ 4:2]. [ತಾಳ್ಮೆಯನ್ನು ಹೊಂದಿದಂತಹ ಮನುಷ್ಯನು] ಕಷ್ಟದ ಕೋಟಲೆಯೊಳಗೆ ಇದ್ದರೂ, ತಾಳಿಕೊಳ್ಳುವವನೂ, ಮತ್ತು ಹೌಹಾರದವನೂ, ಅಥವಾ ಧೈರ್ಯಬೀಡುವವನೂ ಆಗಿರುತ್ತಾನೆ.[8]

*Makrothumia*ವು ವಿಚಾರವನ್ನು ನಿಯತವಾಗಿ ಇರುವಂತೆಯೂ ಅದರಂತೆಯೇ ಜನರೊಡನೆ ಶಾಂತಿಯಿಂದ ಇರುವಂತೆಯೂ ಇರುವ ವಿಚಾರವನ್ನು ಇರಿಸಿಕೊಂಡಂಥದ್ದಾಗಿದೆ.[9] ಪೌಲನು ಇಲ್ಲಿ ಮಾನವ ಸಂಬಂಧದ ಜೊತೆ ವ್ಯವಹರಿಸುತ್ತಿರುವುದರಿಂದ, ಆತನು ಆ ರೀತಿಯನ್ನು ಉತ್ತರಾರ್ಧ ರೀತಿಯನ್ನು ಬಳಸಿದ್ದಾನೆ. ಎಫೆಸದ ಸಭೆಯಲ್ಲಿ ಐಕತ್ಯೆಯ ಜಯಕೋಸ್ಕರ, ಬಿನ್ನಾಭಿಪ್ರಾಯ ಮತ್ತು ವೈಯಕ್ತಿಕ ನೂನ್ಯತೆಯೊಡನೆ ಒಬ್ಬರಿಗೊಬ್ಬರು ಹೇಗೆ ತಾಳ್ಮೆಯಿಂದರಬೇಕು ಎಂಬುದನ್ನು ಆ ಕ್ರೈಸ್ತರಿಗೆ ಕಲಿಸಲು ಇದನ್ನು ಆತನು ಉಪಯೋಗಿಸಿದನು.

**ಪ್ರೀತಿಯಿಂದ ಒಬ್ಬರಿಗೊಬ್ಬರು ಸಹಿಸಿಕೊಳ್ಳಿರಿ** ಎಂಬುದು ತಾಳ್ಮೆಯ ಮೇಲಿನ ಪೌಲನು ವ್ಯಾಖ್ಯಾನವನ್ನು ವಿಸ್ತರಿಸಿವುದಾಗಿದೆ. "ತಾಳ್ಮೆಯನ್ನು ತೋರಿಸುವದು" ಎಂದರೆ ಜನರ ಮಧ್ಯದ ನೂನ್ಯತೆಯನ್ನು ಮತ್ತು ಭಿನ್ನತೆಗಳನ್ನು ತಾಳಿಕೊಳ್ಳುವದು ಎಂದಾಗಿದೆ. ದೇವರ ಉದ್ದೇಶವನ್ನು ಜಗತ್ತಿಗೆ ತಿಳಿಯುವಂತೆ ಮಾಡುವಲ್ಲಿ ಆತನ ಆಯುಧವಾದ ಸಭೆಯ ಬಗೆಗಿನ ಪೌಲನ ದೃಷ್ಟಿಯು ಮಾನವನ ನೂನ್ಯತೆಗಳನ್ನು ಮತ್ತು ಭಿನ್ನತೆಗಳನ್ನು ಗುರುತಿಸುವದು ಸಹ ಆಗಿದ್ದು ಅದರಂತೆಯೇ ಸಭೆಗಾಗಿನ ದೊಡ್ಡ ಚಿತ್ರವನ್ನು ಬೆಳಕಿಗೆ ತರುವುದು ಆಗಿತ್ತು. ಸಭ್ಯರು ತಾಳ್ಮೆಯುಳ್ಳವರೂ ಆಗಿರಿಲು "ಪ್ರೀತಿ"ಯುಳ್ಳವರಾಗಿರಬೇಕು, ಇರರನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳುವ ನಿರ್ಧಾರವನ್ನು ಹೊಂದಿರಬೇಕು, ಅವರಿಗೆ ಒಳ್ಳೆಯದನ್ನು ಮಾಡಬೇಕು, ಮತ್ತು ದೇವರ ಉದ್ದೇಶವನ್ನು ಸಂಪೂರ್ಣಗೊಳಿಸಲು ಅವರನ್ನು ಪ್ರೋತ್ರಾಹಗೊಳಿಸಬೇಕು.

## ಐಕತ್ಯೆಯನ್ನು ಕಾದುಕೊಳ್ಳುವದು (4:3)

**3ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ.**

**ವಚನ 3.** ಐಕತ್ಯೆಯೆಂಬ ಹಂತವನ್ನು ಹೊಂದಿರದಂತೆಯೆ, ಯೋಗ್ಯವಾಗಿ ನಡೆದು ಕೊಳ್ಳುವಿಕೆಯು ಸಭೆಯ ಐಕ್ಯತೆಯಲ್ಲಿ ಒಳಗೊಂಡಿದೆ ಎಂದು ಪೌಲನು ನಿರ್ಧಿಷ್ಟವಾಗಿ ಹೇಳುತ್ತಾನೆ. ಈ ಕ್ರೈಸ್ತರು **ಆಸಕ್ತರಾಗಿ** ಇರುವವರೂ (*spoudazō*) ಮತ್ತು ಸಭೆಯಲ್ಲಿ **ಪವಿತ್ರಾತ್ಮನಿಂದುಟಾಗುವ** ಐಕ್ಯವನ್ನು ಕಾಪಾಡಿಕೊಳ್ಳುವಲ್ಲಿ ಯಾವುದೆ ಶ್ರಮವನ್ನು ಪಡದವರೂ ಆಗಿರುತ್ತಾರೆ. ಯೇಸುವು "ನಮ್ಮ ಸಮಾಧಾನ" (2:14), ಯೆಹೂದಿಗಳು ಮತ್ತು ಅನ್ಯಜನರನ್ನು ಒಬ್ಬರನೊಬ್ಬರು ಮತ್ತಿದೇವರಲ್ಲಿ "ಒಂದೇ ದೇಹವನ್ನಾಗಿಸಿದವನೂ" ಮರುಸಂಧಾನ ಮಾಡಿದವನೂ ಆಗಿದ್ದಾನೆ (2:16). ದೇಹದ ಸದಸ್ಯರು **ಸಮಾಧಾನವನ್ನು ಬಂಧನದಿಂದ** (*sundesmos*) ಕಟ್ಟುವುದನ್ನು ಕಾಪಾಡಿಕೊಳ್ಳಲು ಈಗಾಗಲೆ ಕ್ರಿಸ್ತನಲ್ಲಿ ಒಂದಾಗಿ ಮಾಡಲ್ಪಟ್ಟವರಾದ ಅವರು ಪ್ರತಿಯೊಂದೂ ಶ್ರಮವನ್ನು ಪಡುವವರಾಗಿದ್ದಾರೆ.

ಒಂದಾಗಿ ಮಾಡಲ್ಪಟ್ಟವರಾದ ನಿಯೋಗಿಗಳಾದ ಕ್ರೈಸ್ತರಂತೆಯೇ ಸಭೆಯ ಐಕ್ಯತೆಯು ಮೀಸಲಾದದ್ದು ಮತ್ತು ರಕ್ಷಿಸಲ್ಪಟ್ಟಿದ್ದು ಆಗಿದೆ. ಈ ಐಕ್ಯತೆಯು ಕೇವಲ ರಕ್ಷಿಸಲ್ಪಟ್ಟದ್ದಲ್ಲ, ಆದರೆ ನಮ್ಮ ದೀನತೆಯಲ್ಲಿ, ಸಭ್ಯತೆಯಲ್ಲಿ, ತಾಳ್ಮೆಯಲ್ಲಿ ಮತ್ತು ಒಬ್ಬರನೊಬ್ಬರು ಸಹಿಸಿಕೊಳ್ಳುವಲ್ಲಿ ಕಂಡುಬರುವದು ಆಗಿದೆ. ಪೌಲನು ಈ ಏಳನ್ನೂ "ಒಂದಾಗಿ," ಪಟ್ಟಿಮಾಡಿದ್ದಾನೆ. ಸಭೆಯು ಐಕ್ಯತೆಯಿಂದರುವದು ಏಳು ಸತ್ಯಗಳ ಮೇಲೆಯೇ (4:4-6).

## ಅನ್ವಯ

### ಯೋಗ್ಯತೆ ನಡತೆಯಲ್ಲಿ ಐದು ಗುಣಗಳು (4:2, 3)

ಎಫೆದವರಿಗೆ ಯೋಗ್ಯರೀತಿಯಲ್ಲಿ ನಡೆಯುವ ಸವಾಲನ್ನು ಮಾಡುವಲ್ಲಿ, ಅಂಥ ನಡೆಯಲ್ಲಿ

ಪೌಲನು ಐದು ಲಕ್ಷಣಗಳನ್ನು ಪಟ್ಟಿ ಮಾಡಿದ್ದಾನೆ (4:2, 3). ಈ ಗುಣಗಳಿಲ್ಲದ ವ್ಯಕ್ತಿಯು ಪೌಲನ ಪತ್ರದಲ್ಲಿ ಉಳಿದ ಸೂಚನೆಗಳ ವಿರುದ್ಧ ಬಂಡೆ ಹೇಳಬಹುದು. ಈ ಲಕ್ಷಣಗಳು ಇಲ್ಲಿ ಇರುವ್ರೋ, ಹೇಗೋ, ಕ್ರೈಸ್ತರ ಗುಣವು ದೇವರ ಕರೆಗೆ ಹೊಂದಿಕೆಯಾಗುವವು.

*ನಮ್ರತೆ* (4:2). ನಾವು ಸಂಪೂರ್ಣವಾಗಿ ನಮ್ರರಾಗಿರಬೇಕು. ನಮ್ರತೆ ಎಂದರೆ ದೀನಭಾವದಿಂದ ಇರುವುದನ್ನು ನಮ್ಮಲ್ಲಿ ಯೋಚಿಸುವದು ಎಂದರ್ಥವಲ್ಲ; ನಾವೆ ಎಲ್ಲ ಎಂದು ಯೋಚಿಸುವದು ಇದರ ಅರ್ಥವಾಗಿದೆ. ಅದಲ್ಲದೆ, ನಾವು ನಮ್ಮ ಕರೆಯುವಿಕೆಗೆ ಯಾವು ಕೊಡುಗೆಯನ್ನೂ ನಾವು ಕೊಡುತ್ತಿಲ್ಲ. ಆತ್ಮೀಕವಾಗಿ ನಾವೇನಾಗಿದ್ದೇವೆಯೋ, ನಾವು ವಿಶೇಷವಾಗಿ ದೇವರ ಕೃಪೆಯಿಂದಲೇ ಆಗಿದ್ದೇವೆ. ಆದ್ದರಿಂದ ಗರ್ವವು ಅಸಾಧ್ಯಮಾಡುವುದಾಗಿದೆ.

ನಮ್ರತೆಯು ಗ್ರೀಕರು ಮತ್ತು ರೋಮ್‌ನ್ನರು ಎಂಬ ವಿಷಯವನ್ನು ಕ್ರಾಂತಿಕಾರಕವಾಗಿ ಪರಿಹರಿಸುವ ಸದ್ಗುಣವಾಗಿದೆ. "ನಮ್ರತೆ" ಎಂಬುದರ ಸೂಚಿತವಾಗುವ ಶಾಸ್ತ್ರೀಯ ಪದ ಲಕ್ಷಣದ ಹೀನತ್ವ; ಇದು ಗುಣಮಟ್ಟವನ್ನು ಕೆಳಕ್ಕಿಳಿಸುವಂತೆ ಕಂಡುಬರುವುದಾಗಿದೆ. ಹೊಸ ಒಡಂಬಡಿಕೆಯ ಬರಹದ ಹೊರಗೆ, ಈ ಪದವು ನಿಂದಿಸುವ ರೀತಿಯಲ್ಲಿ ಬಳಸಲ್ಪಟ್ಟಿದ್ದು ಅಶಕ್ತನಾದ ಅಥವಾ ಹೇಡಿಯಾದ ಒಬ್ಬನನ್ನು ಸೂಚಿಸುವುದಾಗಿದೆ.

ಕ್ರೈಸ್ತರು ಹೊಸ ವಿಷಯದಿಂದ ತುಂಬಿದ ಪದವನ್ನು ಜೋಡಿಸುವವರಾಗಿದ್ದಾರೆ. ನಮ್ಮಲ್ಲಿ ಅಯೋಗ್ಯವಾದ ಲಾಭಪಡೆಯುವಂತೆ ಅವಕಾಶವನ್ನು ಸತ್ಯವೇದಿಯ ನಮ್ರತೆಯು ಜನರಿಗೆ ಮುಂದೆ ಕೊಡುವುದಿಲ್ಲ, ಬದಲಾಗಿ ಧೈರ್ಯವಿಲ್ಲದ್ದನು ಕೂಡಾ ಅದು ಸೂಚಿಸುವುದಿಲ್ಲ ನಿಜ ನಮ್ರತೆ ಎಂದರೆ ನಮ್ಮ ಜೀವಿತವನ್ನು ಇಡುವುದು, ಯಾವುದೇ ಅಡೆತಡೆಯಿಲ್ಲದೆ ಆತನ ಮಾರ್ಗವನ್ನು ನಮ್ಮ ಜೀವಿತದಲ್ಲಿ ಒಪ್ಪಿಕೊಳ್ಳುವದು ಯಾಕೆಂದರೆ ಆತನ ಸಹಾಯವಿಲ್ಲದೆ ನಮ್ಮ ನಿತ್ಯದ ದಿಶೆಯನ್ನು ಬದಲಾಯಿಸಲು ನಾವು ಬಲಹೀನರಾಗುತ್ತೇವೆ ಎಂದು ನಾವು ಅರಿತುಕೊಳ್ಳುವದೇ ಆಗಿದೆ.

ನಮ್ರರಾಗಿರುವದು ಎಂಬುದು ಅರ್ಥವು ನಾವು ನಮ್ಮ ಹೃದಯ ಮತ್ತು ಮನಸ್ಸನ್ನು ಯೇಸುವಿನ ಮೇಲೆ ಇಡುವದು ಎಂದರ್ಥ. ಇನ್ನು ಮೇಲೆ ನಮ್ಮ ಸ್ವತಃ ಜೀವಿತದ ಮೇಲೆ ಪ್ರತ್ಯಕ್ಷವಾಗಿ ನೋಡಬೇಕಾಗಿಲ್ಲ. ಬದಲಾಗಿ, ನಾವು ಆತನ ಮಾರ್ಗದರ್ಶನವನ್ನು, ಆತನ ಸೂಚನೆಯನ್ನು ಎದುರುನೋಡಬೇಕಾಗಿದೆ. ಸ್ವಾರ್ಥವು ಇನ್ನು ಮುಂದೆ ಸಿಂಹಾಸನದಲ್ಲಿ ಇರುವುದಿಲ್ಲ; ಯೇಸುವು ಇರುವವನಾಗಿದ್ದಾನೆ.

*ಸಾತ್ವಿಕತ್ವ* (4:2). ನಮ್ರತೆಯ ಪದ ಸಾತ್ವಿಕತ್ವದಿಂದ ಅಥವಾ ವಿಧೇಯತೆಯಿಂದ ಬೆಂಬಲಿತವಾಗಿದ್ದಾಗಿದೆ. ಸಾತ್ವಿಕತ್ವ ಎಂದರೇನು? ಇದು ಹೇಡಿತನವಲ್ಲ. ಕೆಲವು "ವಿಧೇಯತೆ" ಯನ್ನು "ಧೈರ್ಯದಲ್ಲಿ ಕೊರತೆ ಅಥವಾ ಹೇಡಿತನ" ಎಂದು ವ್ಯಾಖ್ಯಾನಿಸುವುದುಂಟು ಆದರೆ ಅದು ಸತ್ಯವೇದದ ವ್ಯಾಖ್ಯೆಯು ಅಲ್ಲ. ಸಾತ್ವಿಕತ್ವವು ಬಲವಿಲ್ಲದಿರುವುದಿಲ್ಲ, ಒಳ್ಳೆದವರಂತೆ ನೆಟ್ಟಗೆ ನಿಲ್ಲುವ ಸ್ವಾರ್ಥವಿಲ್ಲದ ಪುಕ್ಕಲು ವ್ಯಕ್ತಿತ್ವವಲ್ಲ. ತಮ್ಮ ಜೊತೆ ಬರುವವರೆಲ್ಲರ ಜೊತೆ ಸಂಭವಿಸುವ ಪ್ರತಿಯೊಂದಕ್ಕೂ ಒಪ್ಪುವದಕ್ಕೆ ಕಾರಣವಾಗುವಂತೆ ಮನವಲಿಕೆಯ ಕೊರತೆಯು ಅಲ್ಲ. ಸತ್ಯವೇದಿಯ ದೀನತೆಯು "ನಿಯಂತ್ರಣದಲ್ಲಿರುವ ಶಕ್ತಿಯು ಆಗಿದೆ."

ಪೌಲನು ಬಳಸಿದ ಪದದ ಮೂಲ ಅರ್ಥವು "ಕಾಡು ಪ್ರಾಣಿಯನ್ನು ಪಳಗಿಸುವದು" ಎಂದಾಗಿದೆ. ಅರೇಬಿಯನ ಕುದುರೆಯಂತಿರುವ ಅವು ಪ್ರಾಚೀನ ಮಧ್ಯ ಪೂರ್ವದಲ್ಲಿ ಇದ್ದವು. ಕೆಲಜನರು ಕುಣಿಕೆ ಮತ್ತು ಪಂಜರದಿಂದ ಆ ಕುದುರೆಗಳನ್ನು ನಿಂಯತ್ರಿಸುತ್ತಿದ್ದರು. ಈ ಪ್ರಾಣಿಗಳ ಮೇಲೆ ಯಾವಾಗಲೂ ಹೊರೆಯು ಇರುತ್ತಿರಲಿಲ್ಲ; ಅದರ ತಲೆಯ ಮೇಲೆ ಬಿರುಸು ಕೂದಲಾಗಲೀ ಅಥವಾ ಬಾಯಲ್ಲಿ ಕಡಿವಾಣವಾಗಲೀ ಇರುತ್ತಿರಲಿಲ್ಲ. ಈ ದೊಡ್ಡ ಕುದುರೆಯನ್ನು ಬಳಸಲು ಸಮರ್ಥರಾಗಲು ಈ ಜನರು ಏನುಮಾಡುತ್ತಿದ್ದರು? ಅವರು ಅದನ್ನು "ತಡೆಯುತ್ತಿದ್ದರು," ಅನೇಕ ಕೈಚಳಕದಿ ಸರಮಾಲೆಯಿಂದ ಅವರು ಆ

ಕುದುರೆಯನ್ನು ಅದು ತನ್ನ ಬಾಯಲ್ಲಿ ಕಡಿವಾಣವನ್ನು ಒಪ್ಪಿಕೊಳ್ಳುವಂತೆಯೂ, ನೊಗವನ್ನು ಅದರ ತಲೆಗೂ ಮತ್ತು ನೊಗವನ್ನು ಅದರ ಬೆನ್ನಮೇಲೂ ಅದು ಒಪ್ಪಿಕೊಳ್ಳುವಂತೆ ಮಾಡುವ ಮಟ್ಟಿಗೆ ಅವರು ಬರುತ್ತಿದ್ದರು. ಕೊನೆಗೆ ಈ ಬಲಯುತವಾದ, ಘಾಟಿಯಾದ ಪ್ರಾಣಿಯು ನಿಯಂತ್ರಣದಲ್ಲಿ ಬರುತ್ತಿತ್ತು. ಆತನ ಎಲ್ಲ ಗದರಿಸುವಿಕೆ ಮತ್ತು ಶಕ್ತಿ ಬಲಗಳು ಅಲ್ಲಿಯೇ ಇವೆ, ಆದರೆ ಇನ್ನೊಂದರ ನಿಯಂತ್ರಣದ ವಿಷಯಗಳು ಆಗಿವೆ. ಅದು ತನ್ನ ಸವಾರನ ಆಜ್ಞೆಗಳಿಗೆ ಪ್ರತಿಕ್ರಯಿಸಲು ಸಕಾರಾತ್ಮಕವಾಗಿ ಪ್ರತಿಕ್ರಯಿಸುತ್ತಿದ್ದಾನೆ. ಗ್ರೀಕ್ ಇವುಗಳನ್ನು ಇಟ್ಟಂತೆಯೇ, ಆತನು "ದೀನಭಾವ"ದವನಾಗಿದ್ದಾನೆ.

ಆತ್ಮೀಕವಾಗಿ ಮಾತನಾಡುವಾಗ, ಇದು ನಮ್ಮೆಲ್ಲರಿಗೂ ಸಂಭವಿಸುವಂತದ್ದಾಗಿದೆ. ನಾವು ಈ ಜಗತ್ತಿನೊಳಗೆ ಸ್ವತೃಪ್ತಿಗಾಗಿ ಸಂಗತಿಗಾಗಿ, ಹಸಿವುಗಳಿಗಾಗಿ ಮತ್ತು ಮಹತ್ವಾಕಾಂಕ್ಷೆಗಳಿಗಾಗಿ ಹುಟ್ಟಿರುವವರಾಗಿದ್ದೇವೆ. ಈಗ, ನಮ್ರತೆಯ ಮೂಲಕ, ಅವೆಲ್ಲವುಗಳನ್ನೂ ಕರ್ತನ ನಿಯಂತ್ರಣದ ಅಡಿಯಲ್ಲಿ ತರಬೇಕಿದೆ. ಅದು ಸಂಭವಿಸುವಾಗ, ನಮ್ಮ ನಮ್ಮ ನಡೆಸುವಿಕೆಯು ಸುವಾರ್ತೆಯ ಮೂಲಕ ಉನ್ನತಕರೆಯುವಿಕೆಗೆ ಹೊಂದಲು ಆರಂಭವಾಗಬಹುದು.

*ತಾಳ್ಮೆ* (4:2). ನಮ್ಮ ಕರೆಯುವಿಕೆಯ ಮೇಲೆ ಜೀವಿಸಬೇಕಾದರೆ ನಾವು ತಾಳ್ಮೆಯಿಂದ ಇರಬೇಕು. ಪ್ರಾಚೀನ ಗ್ರೀಕರು "ತಾಳ್ಮೆ"ಗೆ ಎರಡು ಪದಗಳನ್ನು ಹೊಂದಿದ್ದರು. ಒಂದು ಜನರು ಹೇಗೆ ಸಂದರ್ಭಗಳೊಂದಿಗೆ ವ್ಯವಹರಿಸುತ್ತಾರೆ; ಇನ್ನೊಂದು ಜನರ ಮಧ್ಯದ ಸಂಬಂಧಗಳ ಜೊತೆ ಇರುವದು ಆಗಿದೆ. ಜನರು ನಂತರ ಅರ್ಥದೊಡನೆ ಪದವನ್ನು ಬಳಸುವವರಾಗಿದ್ದಾರೆ.

ತಾಳ್ಮೆಯಿಂದಿರು ಇದರ ಅರ್ಥವು ನಮ್ಮ ನೋಯಿಸುವ ಇತರರ ವಿರುದ್ಧ ವೈರತ್ವ ಸಾಧಿಸುವುದನ್ನು ನಿಧಾನಮಾಡುವದು ಎಂದರ್ಥವಾಗಿದೆ. ವಾಸ್ತವವಾಗಿ, ತಾಳ್ಮೆಯುಳ್ಳ ವ್ಯಕ್ತಿಯು ರೇಗುವಾಗಲೂ ಕೂಡಾ ನಿಧಾನಿಯಾಗಿರುತ್ತಾನೆ. ಪೌಲನ ಪದದ ಅಕ್ಷರಸಹ ಅರ್ಥವು "ದೀರ್ಘ ಶಾಂತನು" ಎಂದಾಗಿದೆ. ಇತರರ ಮೇಲೆ ಕೂಗಾಡುವದು ಅಥವಾ ಸಿಟ್ಟಿಗೇಳುವುದು ನಮಗೆ ಬೇಕಿಲ್ಲ.

ಯೋಗ್ಯರ ರೀತಿಯಲ್ಲಿ ನಡೆಯುವದು ಎಂಬುದರ ಅರ್ಥವು, ನಾವು ಅನುಭವಿಸುವಂಥ ಅಪಮಾನವನ್ನು, ನೋವನ್ನು, ಹಿಂಸೆಯನ್ನೂ, ಅಯೋಗ್ಯವಾಗಿ ನಡೆಯುವುದನ್ನು ತೆಗೆಳುವಿಕೆಯನ್ನೂ, ದೂಷಣೆಯನ್ನೂ, ಟೀಕೆಯನ್ನೂ, ದ್ವೇಷವನ್ನೂ ಮತ್ತು ವೈರತ್ವ ಆಗಿದ್ದು ಇದು ಸರಿಯಾದದ್ದನ್ನು ಮಾಡುವುದಕ್ಕೆ ಬೆಲೆಯಾಗಿವೆ. ಇದು ಯಾವುದೇ ಕಹಿಯಿಲ್ಲದ ಅಥವಾ ದೂರಿಗಳು ಅಲ್ಲದ ಜನರಿಗೋಸ್ಕರ ನಕಾರಾತ್ಮಕ ಸಂಗತಿಗಳನ್ನು ಮತ್ತು ಜನರನ್ನು ಸ್ವೀಕರಿಸುತ್ತದೆ.

ಆ ರೀತಿಯದ್ದು ನಿಮಗೆ ಅಯೋಗ್ಯವಾದದ್ದು ಎನ್ನಿಸುತ್ತಿದೆಯಾ? ನಮ್ಮ ಸುತ್ತಲಿನ ಜಗತ್ತಿನಿಂದ ನಮ್ಮನ್ನು ಭಿನ್ನಮಾಡುವದು ಯಾವದು? ಯೇಸು ಈ ರೀತಿಯಲ್ಲಿ ನಡೆದ್ದಾದರೆ - ಮತ್ತು ಅದನ್ನು ಆತನು ಮಾಡಿದನು - ಈಗ ಅದರಂತಯೇ ಗುಣಮಟ್ಟದ ಜೀವಿತಕ್ಕಾಗಿ ನಾವು ಕರೆಯಲ್ಪಟ್ಟಿದ್ದೇವೆ.

*ಸಹನೆ* (4:2). ನಾವು ನಾವು ಒಬ್ಬರನ್ನೊಬ್ಬರು ಪ್ರೀತಿಯಲ್ಲಿ ಸಹಿಸಿಕೊಳ್ಳುವವರಾಗಿದ್ದರೆ. ಈ ಸಹನೆಯು ತಾಳ್ಮೆಯಿಂದ ಹೇಗೆ ಭಿನ್ನವಾಗಿದೆ? ಇದು ತಾಳ್ಮೆಯ ಆಂತರ್ಯದಂತಿದ್ದು ಪ್ರಾಯೋಗಿಕವಾಗಿ ಇರುವುದಾಗಿದೆ. ಇತರ ಜನರನ್ನು ಸಹಿಸಿಕೊಳ್ಳುವದು ಎಂದರೆ ಅವರ ತಪ್ಪುಗಳಿಗೆ ಅಥವಾ ನ್ಯೂನ್ಯತೆಗಳಿಗೆ ಕುರುಡರಾಗಿ ಇರುವದು ಎಂದಲ್ಲ. ನಾವು ಅರಿತುಕೊಂಡಂತೆ ಬದಲಾಗಿ ನಾವು ಯೋಗ್ಯರಾಗಿರುವುದಕ್ಕಿಂತ ಕಡಿಮೆಯಾಗಿದ್ದೇವೆ, ಇತರರು ಪರಿಪೂರ್ಣರಾಗಿರಲಾರರು ಈ ಎರಡರಲ್ಲಿ ಒಂದಾಗಿರಬೇಕು. "ನನಗೆ ಬೇಕು ಬೇಡದಂತೆ ಈ ಮನುಷ್ಯನನ್ನು ಸಹಿಸಿಕೊಂಡಿದ್ದೇನೆ" ಎಂದು ಹೇಳಬಾರದು. ಅದರ

ಬದಲಾಗಿ, ಪ್ರೀತಿಯಲ್ಲಿ, ಆ ವ್ಯಕ್ತಿಗೆ ಸೇವೆಮಾಡುವುದನ್ನು ನಾವು ಮುಂದುವರೆಸಬೇಕು, ಆತನಿಗೆ ಒಳ್ಳೆಯದನ್ನೇ ಎದುರುನೋಡಬೇಕು. ಇನ್ನೊಂದು ಮಾತಿನಲ್ಲಿ, ವಿಫಲತೆಗಾಗಿ ಕೋಣೆಯಲ್ಲಿ ಬಿಟ್ಟಿರುವ ಆ ವ್ಯಕ್ತಿಯು ಕ್ರಿಸ್ತನ ದೇಹದಲ್ಲಿ ಪ್ರೌಢನಾಗಲು ಹೋರಾಡುತ್ತಿರುವ ಇನ್ನೊಬ್ಬ ಕ್ರೈಸ್ತನ ಮೇಲೆ ಪ್ರೀತಿಯನ್ನು ಸುರಿಸುವ ಗುಣವಾಗಿದೆ.

*ಐಕತ್ಯೆಯ ಇಚ್ಛೆ* (4:3). ಅನ್ಯೋನ್ಯತೆಯಲ್ಲಿ ಐಕತ್ಯೆಯ ಇಚ್ಛೇಯಲ್ಲಿ ಸುಡದೆ ದೇವರ ಮುಂದೆ ಯೋಗ್ಯವಾಗಿ ನಡೆಯುವದು ಅಸಾಧ್ಯವಾದದ್ದಾಗಿದೆ. ನಾವು ಕೇವಲ ಐಕ್ಯತೆಯ ದೊಡ್ಡ ಅರ್ಥವನ್ನು ಹಾರೈಸಲಾರೆವು; ಇತರರೊಡನೆ ನಮ್ಮ ಸಂಬಂಧವು ನಿಜವಾಗಿ ಆಗಬೇಕಾದರೆ ನಾವು "ಸಾಧನೆ" ಮಾಡುವವರಾಗಿರಬೇಕು. "ಸಾಧನೆ" ಎಂಬ ಪೌಲನ ಪದವು ಎರಡು ಗ್ರೀಕ್ ಪದಗಳ ಸಂಯೋಗವಾಗಿದೆ. ಒಂದರ ಅರ್ಥವು "ಅವಸರಿಸು" ಇನ್ನೊಂದು ಶ್ರದ್ಧೆಯುಳ್ಳ ಶ್ರಮ ಎಂಬುದನ್ನು ಸೂಚಿಸುವುದಾಗಿದೆ. ಎಲ್ಲವೂ ಸೇರಿ, ಆತನ ಪದಗಳು ಈ ರೀತಿಯ ಅರ್ಥವನ್ನು ಕೊಡುವವು ಆಗಿವೆ: "ಐಕ್ಯತೆಯನ್ನು ಸಾಧಿಸುವತ್ತ ಅವಸರಿಸುವಾ ಮತ್ತು ಕಾರ್ಯಮಾಡುವಾ!"

ಗಮನಿಸಿ, ಐಕ್ಯತೆಯನ್ನು ಸೃಷ್ಟಿಸುವದು ನಮ್ಮ ಕಾರ್ಯವಲ್ಲ. ದೇವರ ಆತ್ಮನು ಕ್ರಿಸ್ತನಲ್ಲಿ ಆತನ ರಕ್ತವನ್ನು ಶಿಲುಬೆಯ ಮೇಲೆ ಚಲ್ಲುವ ಮೂಲಕ ನಮಗೆ ಐಕ್ಯತೆಯನ್ನು ಕೊಟ್ಟನು. ದೇವರ ದೃಷ್ಟಿಯಲ್ಲಿ ನಾವು ಐಕ್ಯತೆಯುಳ್ಳವರಾಗಿದ್ದೇವೆ ಯಾಕೆಂದರೆ ಆತನು ನಮ್ಮೆಲ್ಲರನ್ನೂ ಒಂದೇ ದೇಹದಲ್ಲಿ ಇರಿಸಿದ್ದಾನೆ. ಯೋಗ್ಯವಾಗಿ ನಡೆದುಕೊಳ್ಳುವುದರ ಗುಣವು ನಮ್ಮಲ್ಲಿ ಒಬ್ಬರಿಗೊಬ್ಬರು ನಮ್ಮ ಅನ್ಯೋನ್ಯತೆಯನ್ನು ಕಾದುಕೊಳ್ಳುವುದಕ್ಕಾಗಿ ಮಾಡುವ ಪ್ರತಿಯೊಂದು ಕಾರ್ಯವು ಆಗಿದೆ. ನಮ್ಮಲ್ಲಿರುವ ಎಲ್ಲವನ್ನು ನಮ್ಮಲ್ಲಿ ಪ್ರತಿಯೊಬ್ಬರೊಡನೆಯ ಅನ್ಯೋನ್ಯತೆಯನ್ನು ಕಾದುಕೊಳ್ಳಲು ನಾವು ಆತ್ಮೀಕವಾಗಿ ಕೊಡುವದೇ ಆಗಿದೆ. ಇತರ ವಿರುದ್ಧ ಪಾಪಗಳನ್ನು ನಾವು ಅರಿಕೆಮಾಡಬೇಕು; ಪ್ರತಿದಾನ ಮಾಡುವಲ್ಲಿ ನಾವು ಕಲಹಪ್ರೀಯರಾಗಿರುತ್ತೇವೆ; ಮತ್ತು ರಾಜಿಯಾಗುವುದಕ್ಕಿಂತ ಮುನ್ನವೇ ಕ್ಷಮಾಪಣೆಯನ್ನು ಕೊಡುವವರಾಗಿರುತ್ತೇವೆ. ಒಡೆದುಹೋದ ಸಂಬಂಧವನ್ನು ಪುನಃ ತುಂಬಿಸುವಲ್ಲಿ ದೇವರ ಹಾಗೆ ಮೊದಲ ಹೆಜ್ಜೆಯನ್ನು ಇಡಲು ನಾವೇನಾದರೂ ಮಾಡುವವರಾಗಿದೇವೆಯೋ? ಸಭೆಯು ತಮ್ಮ ಐಕ್ಯತೆಯ ಆತ್ಮವನ್ನು ಕಾದುಕೊಳ್ಳುವ ಮೂಲಕ ದೇವರ ಕರೆಯ ಪ್ರಕಾರ ನಾವು ಎಷ್ಟು ಯೋಗ್ಯವಾಗಿ ನಡೆಯುತ್ತಿದ್ದೇವೆಂಬುದಕ್ಕೆ ಎಷ್ಟು ಕಾಳಜಿಪೂರಕವಾಗಿ ನಾವು ಸಹಾಯ ಮಾಡಬೇಕಿದೆ. Chris Bullard

ಟಿಪ್ಪಣೆಗಳು

[1]"ನಡೆ" ಎಂಬುದರಲ್ಲಿ ಬಳಿಕೆಯಾದ ವಚನಗಳು 4:1; 5:2, 8, 15ರಲ್ಲಿನ ಬೋಧನೆಗಳು ಆಗಿವೆ. ಈ ಭಾಗಗಳು ನಾಲ್ಕು ನಡೆಗಳಾದ 4:1-32; 5:1-6; 5:7-14; 5:15-6:20. ಸೂಚಿಸುವವು ಆಗಿವೆ. [2]Andrew T. Lincoln, *Ephesians,* Word Biblical Commentary, vol. 42 (Dallas: Word Books, 1990), 234. [3]Ibid., 94. [4]Ethelbert W. Bullinger, *A Critical Lexicon and Concordance to the English and Greek New Testament* (London: Samuel Bagster and Sons, n.d.; reprint, Grand Rapids, Mich.: Zondervan Publishing House, Regency Reference Library, 1975), 904. [5]Lincoln, 235. [6]S. D. F. Salmond, "The Epistle to the Ephesians," in *The Expositor's Greek Testament,* ed. W. Robertson Nicoll (Grand Rapids, Mich.: Wm. B. Eerdmans Publishing Co., 1967), 3:320. [7]Lincoln, 236. [8]Richard C. Trench, *Synonyms of the New Testament* (Grand Rapids, Mich.: Wm. B. Eerdmans Publishing Co., 1953), 198. [9]Lincoln, 236.